ಅ) ನೇರ ನೇಮಕಾತಿಯಲ್ಲಿ.

1. ಪರಿಶಿಷ್ಟ ಜಾತಿ 15 ಪ್ರತಿ ಶತ
2. ಪರಿಶಿಷ್ಟ ವರ್ಗ 3 ಪ್ರತಿ ಶತ
* 3. ಹಿಂದುಳಿದ ಗುಂಪು-ಎ 5 ಪ್ರತಿ ಶತ
* 4. ಹಿಂದುಳಿದ ಗುಂಪು-ಬಿ 13 ಪ್ರತಿ ಶತ
* 5. ಹಿಂದುಳಿದ ಗುಂಪು-ಸಿ 16 ಪ್ರತಿ ಶತ
* 6. ಹಿಂದುಳಿದ ಗುಂಪು-ಡಿ 11 ಪ್ರತಿ ಶತ
* 7. ಹಿಂದುಳಿದ ಗುಂಪು-ಇ 5 ಪ್ರತಿ ಶತ

ಆ) ಬಡ್ತಿಯಲ್ಲಿ : (ದಿ ; 29.4.78 ರಿಂದ)

1. ಪರಿಸಿಷ್ಟ ಜಾತಿ 15 ಪ್ರತಿಸತ
2. ಪರಿಶಿಷ್ಟ ವರ್ಗ 3 ಪ್ರತಿಶತ

(* ದಿನಾಂಕ 12.12.86 ರಿಂದ ಜಾರಿಯಲ್ಲಿದೆ)

ಈ) ರಿಕ್ತ ಸ್ಥಾನಗಳ ಬಗ್ಗೆ ಇತ್ತೀಚಿನ ಮಾಹಿತಿ ಲಭ್ಯವಿಲ್ಲ. ದಿನಾಂಕ 31-3-1990ರ ವೇಳೆಗೆ ವಿವಿಧ ವೇತನ ಶ್ರೇಣಿಯಲ್ಲಿದ್ದ ಒಟ್ಟು ರಿಕ್ತ ಸ್ಥಾನಗಳ ಸಂಖ್ಯೆ. 54,022. ಕಾಲಕಾಲಕ್ಕೆ ಜಾರಿಗೆ ಬಂದ ಹಾಗೂ ಪ್ರಸ್ತುತ ಜಾರಿಯಲ್ಲಿರುವ ಸರ್ಕಾರದ ಮಿತವ್ಯಯ ಆದೇಶಗಳು ಮತ್ತು ನೇರ ನೇಮಕಾತಿಯಲ್ಲಿನ ನಿರ್ಬಂಧದಿಂದಾಗಿ, ಹೆಚ್ಚಿನ ರಿಕ್ತ ಸ್ಥಾನಗಳನ್ನು ಭರ್ತಿ ಮಾಡಲಾಗಿಲ್ಲ. ಆದರೆ, ಆಗತ್ಯಕ್ಕೆ ತಕ್ಕಂತೆ ಈ ಮಿತವ್ಯಯ ಆದೇಶಗಳನ್ನು ನೇರ ನೇಮಕಾತಿ ನಿರ್ಬಂಧವನ್ನು ಸಡಿಲಿಸಿ, ನೇಮಕಾತಿ ಮಾಡಿಕೊಳ್ಳಲಾಗುತ್ತಿದೆ.

ರಾಜ್ಯ ಸರ್ಕಾರದ ಸೇವೆಗೆ ಸೇರಲು ಅಗತ್ಯವಾಗಿರುವ ಅರ್ಹತೆ.

3255 - ಶ್ರೀ ಹೆಚ್.ಎಂ. ರೇವಣ್ಣ(ಮಾಗಡಿ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರದ ಸೇವೆಗೆ ಸೇರಿಸಲಿಚ್ಛಿಸುವ ಅಭ್ಯರ್ಥಿಯ ಪಾಲಕರು ಅಥವಾ ಪೋಷಕರು ಈ ರಾಜ್ಯದ ಪ್ರಜೆಗಳು ಆಗಿರಬೇಕಲ್ಲವೇ, ಹಾಗಿಲ್ಲದಿದ್ದಲ್ಲಿ ಸರ್ಕಾರದ ಸೇವೆಗೆ ಸೇರಿಕೊಂಡಿದ್ದರೆ, ಅಂತಹವರ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗುವುದು?

ಆ) ರಾಜ್ಯ ಸರ್ಕಾರದ ಸೇವೆಗೆ ಸೇರಲಿಚ್ಛಿಸುವ ಅಭ್ಯರ್ಥಿಯ ಪಾಲಕರು ಅಥವಾ ಪೋಷಕರು ಬೇರೆ ರಾಜ್ಯಗಳಲ್ಲಿ ವಾಸಿಸುತ್ತಿದ್ದರೂ ಆ ಅಭ್ಯರ್ಥಿಯ ಪ್ರೌಢ ಶಿಕ್ಷಣದವರೆಗೂ ವ್ಯಾಸಂಗ ರಾಜ್ಯದಲ್ಲಾಗಿದ್ದರೆ, ವಿನಾಯತಿ ಉಂಟೇ, ಹಾಗಿಲ್ಲದಿದ್ದಲ್ಲಿ ಇಂತಹ ಅಭ್ಯರ್ಥಿ ಸೇವೆಗೆ ಸೇರಿಕೊಂಡಿದ್ದರೆ ಸರ್ಕಾರ ಯಾವ ಕ್ರಮ ಕೈಗೊಳ್ಳುವುದು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಯವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠ ಸ್ಥಾಪಿಸುವುದು

2844 - ಶ್ರೀ ಶಿವಾನಂದ ಎಚ್. ಕೌಜಲಗಿ(ಬೈಲಹೊಂಗಲ): ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕರ್ನಾಟಕದಲ್ಲಿ ಉಚ್ಚ ನ್ಯಾಯಾಲಯದ ಪೀಠ ಸ್ಥಾಪಿಸುವ ಸಲುವಾಗಿ ಸರ್ಕಾರಕ್ಕೆ ಉಚ್ಚ ನ್ಯಾಯಲಯದ ಪೀಠವನ್ನು ಸ್ಥಾಪಿಸಲು ಮನವಿಗಳು ಬಂದಿವೆಯೇ? ಬಂದಿದ್ದಲ್ಲಿ ಯಾವ ಯಾವ ಸ್ಥಳಗಳಲ್ಲಿ ಸ್ಥಾಪಿಸಲು ಮನವಿಗಳು ಬಂದಿರುವುವು?

ಆ) ಬೆಳಗಾವಿ ಜಿಲ್ಲೆಯಲ್ಲಿ ಡಿವಿಜನಲ್ ಹೆಡ್‌ಕ್ವಾರ್ಟರ್ಸ್ ಇದ್ದು ಉಚ್ಚ ನ್ಯಾಯಾಲಯ ಪೀಠ ಸ್ಥಾಪಿಸಲು ಎಲ್ಲಾ ಅರ್ಹತೆಗಳನ್ನು ಹಾಗೂ ಎಲ್ಲಾ ಸೌಕರ್ಯಗಳನ್ನು ಪಡೆದಿದ್ದು ಅಲ್ಲಿ ಉಚ್ಚ ನ್ಯಾಯಾಲಯ ಪೀಠ ಸ್ಥಾಪಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು):

ಅ) ಬಂದಿವೆ.

ಆ) ಕೇಂದ್ರ ಸರ್ಕಾರ ನೇಮಿಸಿದ ಜೆಸ್ವಂತ್ ಸಿಂಗ್ ಆಯೋಗದ ಅಭಿಪ್ರಾಯದ ಪ್ರಕಾರ ಉಚ್ಚ ನ್ಯಾಯಾಲಯದ ಪೀಠವನ್ನು ಅದರ ಕೇಂದ್ರ ಸ್ಥಾನದಿಂದ ಹೊರಗೆ ಸ್ಥಾಪಿಸುವ ಬಗೆಗಿನ ಪ್ರಸ್ತಾವನೆಗೆ ಉಚ್ಚ ನ್ಯಾಯಾಲಯದ ಒಪ್ಪಿಗೆ ಪಡೆಯಬೇಕಾಗಿದ್ದು, ಅದರಂತೆ ಉಚ್ಚ ನ್ಯಾಯಲಯದ ಒಪ್ಪಿಗೆಯನ್ನು ಕೋರಲಾಗಿತ್ತು. ಆದರೆ, ಈ ಪ್ರಸ್ತಾವನೆಗೆ ಉಚ್ಚ ನ್ಯಾಯಾಲಯವು ಒಪ್ಪಿಗೆ ನೀಡಿಲ್ಲ. ಉಚ್ಚ ನ್ಯಾಯಾಲಯದ ಒಪ್ಪಿಗೆಯಿಲ್ಲದೆ ಸರ್ಕಾರ ಈ ಬಗ್ಗೆ ಯಾವ ಮುಂದಿನ ಕ್ರಮ ಕೈಗೊಳ್ಳುವಂತಿಲ್ಲ.

ಸಚಿವ ಸಂಪುಟದ ನಿರ್ಣಯದಂತೆ ಮತ್ತೆ ವಿಷಯವನ್ನು ಮುಖ್ಯ ನ್ಯಾಯಾಧೀಶರೊಂದಿಗೆ ಚರ್ಚಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಡಾ. ಅಂಬೇಡ್ಕರ್ ಶತಮಾನೋತ್ಸವದ ಅಂಗವಾಗಿ ಅವಧಿಪೂರ್ವ ಖೈದಿಗಳನ್ನು ಬಿಡುಗಡೆ ಮಾಡುವುದು.

3189 - ಶ್ರೀ ಶಿವಾನಂತ ಹೆಚ್. ಕೌಜಲಗಿ (ಬೈಲಹೊಂಗಲ): ಮಾನ್ಯ ಬಂಧೀಖಾನೆ ಮತ್ತು ಗೃಹ ರಕ್ಷಕ ದಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಡಾ. ಅಂಬೇಡ್ಕರ್ ಶತಮಾನೋತ್ಸವದ ಅಂಗವಾಗಿ ಅವಧಿಪೂರ್ವ ಖೈದಿಗಳನ್ನು ಬಿಡುಗಡೆ ಮಾಡಲು ಸರ್ಕಾರವು ಉದ್ದೇಶಿಸಿದೆಯೆ?

ಆ) ಹಾಗಿದ್ದಲ್ಲಿ ಅವರನ್ನು ಬಿಡುಗಡೆ ಮಾಡಲು ಸರ್ಕಾರವು ಕೈಗೊಂಡ ಕ್ರಮವೇನು?

ಇ) ಬೆಳಗಾಂ ಸೆಂಟ್ರಲ್ ಜೈಲಿನಲ್ಲಿ 7 ವರ್ಷಕ್ಕಿಂತಲೂ ಹೆಚ್ಚು ಶಿಕ್ಷೆ ಅನುಭವಿಸಿದ ಖೈದಿಗಳೆಷ್ಟು?

ಈ) ಜೀವಾವಧಿ ಶಿಕ್ಷೆ ಅನುಭವಿಸುತ್ತಿರುವ ಖೈದಿಗಳೆಷ್ಟು?

ಉ) ಇವರಲ್ಲಿ ಅಂಬೇಡ್ಕರ್ ಶತಮಾನೋತ್ಸವದ ಅಂಗವಾಗಿ ಬಿಡುಗಡೆಯಾಗುವ ಖೈದಿಗಳೆಷ್ಟು? ಅವರ ಹೆಸರು ಮತ್ತು ವಿವರವನ್ನೊದಗಿಸುವುದು?

ಶ್ರೀ ಡಿ.ಕೆ. ಶಿವಕುಮಾರ್ (ಬಂಧೀಖಾನೆ ಮತ್ತು ಗೃಹ ರಕ್ಷಕ ದಳದ ರಾಜ್ಯ ಸಚಿವರು):

ಅ) ಈಗಾಗಲೇ ಆದೇಶ ಹೊರಡಿಸಲಾಗಿದೆ.

ಆ) ದಿನಾಂಕ 18-12-78ರ ಮೊದಲು ಜೀವಾವಧಿ ಶಿಕ್ಷೆಗೆ ಗುರಿಯಾಗಿದ್ದ ಎಲ್ಲಾ ಖೈದಿಗಳನ್ನು ಬಿಡುಗಡೆ ಮಾಡಲಾಗಿದೆ.

ಇ) 149.